aglasem.com

FOR KARNATAKA CLASS 11 PREPARATION

Karnataka 1st PUC Model Question Paper 2027 for Psychology (Paper 1, Kannada Medium)

EXAM	YEAR	TYPE	SUBJECT
Karnataka Class 11	2027	Sample Paper	Psychology

ಕರ್ನಾಟಕ ಸರ್ಕಾರ

ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ)

ಪ್ರಥಮ ಪಿಯುಸಿ ಮಾದರಿ ಪ್ರಶ್ನೆಪತ್ರಿಕೆ (2026–27) – 1

ವಿಷಯ: ಮನೋವಿಜ್ಞಾನ (32)
(ಕನ್ನಡ ಮಾಧ್ಯಮ)

ಸಮಯ: 3 ಗಂಟೆಗಳು **ಒಟ್ಟು ಪ್ರಶ್ನೆಗಳ ಸಂಖ್ಯೆ: 44**
ಗರಿಷ್ಠ ಅಂಕಗಳು: 80

ಸೂಚನೆಗಳು

1. ಪ್ರಶ್ನೆಪತ್ರಿಕೆಯು A, B, C, D ಮತ್ತು E ಎಂಬ 5 ಭಾಗಗಳನ್ನು ಒಳಗೊಂಡಿದ್ದು, I, II, III, IV, V, VI, VII ಮತ್ತು VIII ವಿಭಾಗಗಳನ್ನು ಹೊಂದಿದೆ.
2. ಎಲ್ಲಾ ಭಾಗಗಳು ಕಡ್ಡಾಯವಾಗಿವೆ.
3. ಉತ್ತರಗಳನ್ನು ಸಂಪೂರ್ಣವಾಗಿ ಇಂಗ್ಲಿಷ್ ಅಥವಾ ಕನ್ನಡದಲ್ಲಿ ಬರೆಯಬೇಕು.
4. ಭಾಗ 'A'ರ ಪ್ರಶ್ನೆಗಳಿಗೆ ಒಂದಕ್ಕಿಂತ ಹೆಚ್ಚು ಉತ್ತರಗಳನ್ನು ಬರೆದಿದ್ದರೆ, ಮೊದಲು ಬರೆದ ಉತ್ತರವನ್ನು ಮಾತ್ರ ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದು

ಭಾಗ – ಎ

I. ನೀಡಿರುವ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆಯ್ಕೆಮಾಡಿ. **(5 × 1 = 5)**

1. ಮೊದಲ ಮನೋವಿಜ್ಞಾನ ಪ್ರಯೋಗಾಲಯವನ್ನು ಸ್ಥಾಪಿಸಿದ ವರ್ಷ

a. 1891 b. 1879 c. 1888 d. 1867

2. ಪ್ರಶ್ನೆಗಳಿಗೆ ನಿಖರವಾಗಿ ಉತ್ತರಿಸಲು ತೆಗೆದುಕೊಳ್ಳುವ ಸಮಯದ ಆಧಾರದ ಮೇಲೆ ವ್ಯಕ್ತಿಗಳನ್ನು ಮೌಲ್ಯಮಾಪನ ಮಾಡುವ ಪರೀಕ್ಷೆ

a. ಮೌಖಿಕ ಪರೀಕ್ಷೆ b. ಅಮೌಖಿಕ ಪರೀಕ್ಷೆ c. ಕಾರ್ಯನಿರ್ವಹಣಾ ಪರೀಕ್ಷೆ d. ವೇಗ ಪರೀಕ್ಷೆ

3. ಇದು ಎತ್ತರ, ತೂಕ, ಕಣ್ಣು ಮತ್ತು ಚರ್ಮದ ಬಣ್ಣದಂತಹ ದೈಹಿಕ ಲಕ್ಷಣಗಳನ್ನೂ, ಬುದ್ಧಿಮತ್ತೆ, ಸೃಜನಶೀಲತೆ ಮತ್ತು ವ್ಯಕ್ತಿತ್ವದ ಲಕ್ಷಣಗಳಂತಹ ಅನೇಕ ಮನೋವೈಜ್ಞಾನಿಕ ಗುಣಲಕ್ಷಣಗಳನ್ನೂ ಒಳಗೊಂಡಿರುತ್ತದೆ.

a. ವಂಶಾವಳಿ b. ಪ್ರತಿವರ್ತನ c. ರೂಪಾವಳಿ d. ಸರ್ವ ಜೀವತ್ವವಾದ

4. ನಮ್ಮ ಸಂವೇದನಾ ಅಂಗಗಳು ಸ್ವೀಕರಿಸಿದ ಮಾಹಿತಿಯನ್ನು ತಪ್ಪಾಗಿ ಅರ್ಥೈಸುವುದರಿಂದ ಉಂಟಾಗುವ ತಪ್ಪುಗ್ರಹಿಕೆಗಳನ್ನು ಸಾಮಾನ್ಯವಾಗಿ _____ ಎಂದು ಕರೆಯುತ್ತಾರೆ

a. ಭ್ರಮೆ b. ವಿಭ್ರಮೆ c. ಪ್ರತ್ಯಕ್ಷಾನುಭವ d. ಪೈ-ವಿದ್ಯಮಾನ

5. ಸಾಧಕ ಅನುಬಂಧ ಕಲಿಕೆಯನ್ನು ಮೊದಲಿಗೆ ಅಧ್ಯಯನ ಮಾಡಿದವರು _____

a. ಪಾವ್ಲವ್ b. ಸ್ಕಿನ್ನರ್ c. ಬಂಡೂರಾ d. ಕೊಹ್ಲರ್

II. ಆವರಣದಲ್ಲಿ ನೀಡಿರುವ ಸೂಕ್ತ ಪದಗಳಿಂದ ಖಾಲಿ ಜಾಗಗಳನ್ನು ತುಂಬಿರಿ. **(5 × 1 = 5)**

(ಟೆರಟೋಜೆನ್‌ಗಳು, ಏಕನೇತ್ರ ಸೂಚನೆಗಳು, ಕೇಂದ್ರೀಕರಣ, ಆತ್ಮ, ಅಗತ್ಯತೆ, ಸಂವೇಗ, ಸ್ಮೃತಿ ತಂತ್ರಗಳು)

6. Psyche (ಸೈಕಿ) ಎಂಬ ಪದದ ಅರ್ಥ _____.

7. ಅಸಹಜತೆಗಳು ಅಥವಾ ಮರಣಕ್ಕೆ ಕಾರಣವಾಗುವ ಪರಿಸರದಲ್ಲಿರುವ ಅಂಶಗಳನ್ನು _____ ಎಂದು ಕರೆಯುತ್ತಾರೆ.

8. ರೇಖೀಯ ದೃಷ್ಟಿಕೋನವು _____ ಗೆ ಒಂದು ಉದಾಹರಣೆಯಾಗಿದೆ.

9. _____ ಸ್ಮರಣೆಯನ್ನು ಉತ್ತಮಪಡಿಸಲು ಸಹಾಯ ಮಾಡುತ್ತದೆ.

10. _____ ಎಂದರೆ ಕೊರತೆ ಅಥವಾ ಅಭಾವ.

III. ಹೊಂದಿಸಿ ಬರೆಯಿರಿ. **(5 × 1 = 5)**

ಅ	ಆ
1. ಕೋಹ್ಲ್‌ಬರ್ಗ್	a. ಯಾವುದೇ ಎರಡು ಭಾಷೆಗಳಲ್ಲಿ ಪರಿಣತಿ
2. ಫಿಲ್ಟರ್ ಅಟೆನ್ಯೂಯೇಷನ್ ಸಿದ್ಧಾಂತ	b. ಗುರಿ-ಕೇಂದ್ರಿತ ವರ್ತನೆ
3. ಮಾದರಿ ಹಂತ	c. ನೈತಿಕ ಬೆಳವಣಿಗೆ
4. ದ್ವಿಭಾಷಿಕತೆ	d. ಟ್ರೈಸ್ಮನ್
5. ಪ್ರೇರಣೆ	e. ಚಲನಾತ್ಮಕ ವರ್ತನೆ
	f. ಅಟ್ಕಿನ್ಸನ್ ಮತ್ತು ಶಿಫ್ರಿನ್

IV. ಕೆಳಗಿನ ಪ್ರಶ್ನೆಗಳಿಗೆ ಒಂದು ಪದ ಅಥವಾ ಒಂದು ವಾಕ್ಯದಲ್ಲಿ ಉತ್ತರಿಸಿ. **(5 × 1 = 5)**

12. ಯಾವುದೇ ಒಂದು ಪರಿಮಾಣಾತ್ಮಕ ವಿಧಾನವನ್ನು ಹೆಸರಿಸಿ.

13. LTM ಅನ್ನು ವಿಸ್ತರಿಸಿ ಬರೆಯಿರಿ.

14. ಅಂತರ್ದೃಷ್ಟಿ ಕಲಿಕೆ ಎಂದರೇನು?

15. ಜೆ. ಪಿ. ಗಿಲ್ಫೋರ್ಡ್ ಸೂಚಿಸಿದ ಯಾವುದಾದರೂ ಒಂದು ಆಲೋಚನಾ ಪ್ರಕಾರವನ್ನು ಹೆಸರಿಸಿ.

16. ಅಗತ್ಯಗಳ ಶ್ರೇಣೀಕರಣದ ಸಿದ್ಧಾಂತವನ್ನು ನೀಡಿದವರು ಯಾರು?

ಭಾಗ – ಬಿ

V. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಏಳು ಪ್ರಶ್ನೆಗಳಿಗೆ ತಲಾ 2 ರಿಂದ 3 ವಾಕ್ಯಗಳಲ್ಲಿ ಉತ್ತರಿಸಿ. **(7 × 2 = 14)**

17. ಮನೋವಿಜ್ಞಾನದ ಯಾವುದಾದರೂ ಎರಡು ಉದಯೋನ್ಮುಖ ಶಾಖೆಗಳನ್ನು ಬರೆಯಿರಿ.

18. ಸಹಸಂಬಂಧದ ವಿಧಗಳನ್ನು ಬರೆಯಿರಿ.

19. ವೃದ್ಧಾಪ್ಯದಲ್ಲಿ ವ್ಯಕ್ತಿಗಳು ಎದುರಿಸುವ ಯಾವುದಾದರೂ ಎರಡು ಸವಾಲುಗಳನ್ನು ಹೆಸರಿಸಿ.

20. ಫೈ-ವಿದ್ಯಮಾನ ಎಂದರೇನು?

21. ಕಲಿಕೆ ಎಂದರೇನು?

22. ಪ್ರಾಥಮಿಕ ಮತ್ತು ಅನುಷಂಗಿಕ ಪುನರ್ಬಲನಗಳ ನಡುವಿನ ವ್ಯತ್ಯಾಸವನ್ನು ತಿಳಿಸಿ.

23. ಮುರುಕು (ವಿಭಾಗ) ಎಂದರೇನು? ಒಂದು ಉದಾಹರಣೆ ನೀಡಿ.

24. ಪ್ರತಿರೋಧಾತ್ಮಕ ಹಸ್ತಕ್ಷೇಪ ಎಂದರೇನು? ಒಂದು ಉದಾಹರಣೆ ನೀಡಿ.

25. ಆಲೋಚನೆ ಎಂದರೇನು?

26. ಮಾನಸಿಕಬಿಂಬ ಎಂದರೇನು?

27. ಪ್ರೇರಣೆಯ ವಿಧಗಳನ್ನು ಹೆಸರಿಸಿ.

ಭಾಗ – ಸಿ

VI. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಆರು ಪ್ರಶ್ನೆಗಳಿಗೆ ತಲಾ 10 ರಿಂದ 12 ವಾಕ್ಯಗಳಲ್ಲಿ ಉತ್ತರಿಸಿ. **(6 × 4 = 24)**

28. ನೈದಾನಿಕ ಮನೋವಿಜ್ಞಾನ ಮತ್ತು ಆಪ್ತ ಸಲಹಾ ಮನೋವಿಜ್ಞಾನದ ಕುರಿತು ಟಿಪ್ಪಣಿ ಬರೆಯಿರಿ.

29. ಅವಲೋಕನದ ವಿಧಗಳನ್ನು ವಿವರಿಸಿ.

30. ಮನೋವೈಜ್ಞಾನಿಕ ವಿಚಾರಣೆಯ ಮಿತಿಗಳನ್ನು ವಿವರಿಸಿ.

31. ಬಾಲ್ಯದಲ್ಲಿ ಕಂಡುಬರುವ ಸ್ಥೂಲ ಮತ್ತು ಸೂಕ್ಷ್ಮ ಚಲನ ಕೌಶಲಗಳು ಯಾವುವು?

32. ಅಧಿವಯಸ್ಸಿನವರಲ್ಲಿ ಕಂಡುಬರುವ ಕಳವಳಕಾರಿ ಅಂಶಗಳು ಯಾವುವು? ಯಾವುದಾದರೂ ಎರಡನ್ನು ವಿವರಿಸಿ.

33. ಉದ್ದ ಮತ್ತು ಅಡ್ಡಗೆರೆಗಳ ಭ್ರಮೆ ಮತ್ತು ಮುಲ್ಲರ್–ಲೈಯರ್ ಭ್ರಮೆಯನ್ನು ಚಿತ್ರಸಹಿತ ವಿವರಿಸಿ.

34. ಸಾಮಾನ್ಯೀಕರಣ ಮತ್ತು ವಿಭೇಧಗಳ ನಡುವಿನ ವ್ಯತ್ಯಾಸವನ್ನು ತಿಳಿಸಿ.

35. ಜ್ಞಾಪಕ ಶಕ್ತಿಯನ್ನು ಹೇಗೆ ಹೆಚ್ಚಿಸಬಹುದು? ವಿವರಿಸಿ.

36. 'ಪರಿಕಲ್ಪನೆ' ಎಂದರೇನು? ಆಲೋಚನಾ ಪ್ರಕ್ರಿಯೆಯಲ್ಲಿ ಪರಿಕಲ್ಪನೆಗಳ ಪಾತ್ರವನ್ನು ವಿವರಿಸಿ.

37. ಸೃಜನಾತ್ಮಕ ಚಿಂತನೆಯನ್ನು ಹೇಗೆ ಹೆಚ್ಚಿಸಬಹುದು?

ಭಾಗ – ಡಿ

VII. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ತಲಾ 20 ರಿಂದ 25 ವಾಕ್ಯಗಳಲ್ಲಿ ಉತ್ತರಿಸಿ: (2 × 6 = 12)

38. ದೈನಂದಿನ ಜೀವನದಲ್ಲಿ ಪರಿಹಾರಗಳನ್ನು ಒದಗಿಸಲು ಮನೋವಿಜ್ಞಾನವು ಹೇಗೆ ಸಹಾಯ ಮಾಡುತ್ತದೆ?

39. ಅವಧಾನ ಆಯ್ಕೆ ಎಂದರೇನು? ಆಯ್ಕೆ ಅವಧಾನದ ಮೇಲೆ ಪರಿಣಾಮ ಬೀರುವ ಅಂಶಗಳನ್ನು ವಿವರಿಸಿ.

40. ಕಲಿಕಾ ನ್ಯೂನತೆ ಎಂದರೇನು? ಕಲಿಕಾ ನ್ಯೂನತೆ ಹೊಂದಿರುವ ವಿದ್ಯಾರ್ಥಿಗಳನ್ನು ನಾವು ಹೇಗೆ ಗುರುತಿಸಬಹುದು?

41. ದೈನಂದಿನ ಜೀವನದಲ್ಲಿ ಕೋಪವನ್ನು ನಿರ್ವಹಿಸುವ ತಂತ್ರಗಳನ್ನು ವಿವರಿಸಿ.

ಭಾಗ – ಇ

ಪ್ರಾಯೋಗಿಕ ಭಾಗ

VIII. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಉತ್ತರಿಸಿ. (2 × 5 = 10)

42. ವರದಿಯ ನಿಖರತೆಯ ಮೇಲೆ ನಿರ್ದೇಶಿತ ಅವಲೋಕನದ ಪರಿಣಾಮವನ್ನು ಅಧ್ಯಯನ ಮಾಡಲು ನೀವು ಅನುಸರಿಸಿದ ಯೋಜನೆ ಮತ್ತು ವಿಧಾನವನ್ನು ಬರೆಯಿರಿ.

43. ಸ್ವಯಂ-ಪರಿಕಲ್ಪನೆಯನ್ನು ಅಧ್ಯಯನ ಮಾಡಲು ನೀವು ಅನುಸರಿಸಿದ ಯೋಜನೆ ಮತ್ತು ವಿಧಾನವನ್ನು ಬರೆಯಿರಿ.

44. ಧಾರಣೆಯ ಮೇಲೆ ಅರ್ಥದ ಪರಿಣಾಮವನ್ನು ನಿರ್ಧರಿಸಲು ನೀವು ಅನುಸರಿಸಿದ ಯೋಜನೆ ಮತ್ತು ಕಾರ್ಯವಿಧಾನವನ್ನು ಬರೆಯಿರಿ.